ಗ್ರಾಮಾಂತಯರ ಉಪ ವಿಭಾಗ ಇವರಿಗೆ ದಿನಾಂಕ 03.10.2008 ರಂದು ಕ್ರಿಯಾ ಯೋಜನೆ ಮಂಡಿಸಲು ನಿರ್ದೇಶನ ನೀಡಲಾಗಿದೆ.

ಇ) ಎಷ್ಟು ಕಾಲಮಿತಿಯಲ್ಲಿ ಸುಸಜ್ಜಿತ ಸೌಕರ್ಯಗಳುಳ್ಳ ವನಧಾಮವನ್ನು ರೂಪಿಸಲಾಗುವುದು?

ಕೆಂಪೇಗೌಡ ವನಧಾಮವನ್ನು ಸುಸಜ್ಜಿತ ಸೌಕರ್ಯಗಳುಳ್ಳ ವನಧಾಮವನ್ನಾಗಿ ರೂಪಿಸಲು ಆದಷ್ಟು ಬೇಗ ಕ್ರಮ ಕೈಗೊಳ್ಳಲಾಗುವುದು.

13ನೇ ವಿಧಾನಸಭೆ 3ನೇ ಅಧಿವೇಶನ

231 ಶ್ರೀ ಶಿವಲಿಂಗೇಗೌಡ ಕೆ.ಎಂ.

ಸಿ.ಎಂ.ಉದಾಸಿ ಲೋಕೋಪಯೋಗಿ ಸಚಿವರು

ಅ) ಲೋಕೋಪಯೋಗಿ ಇಲಾಖೆಯಿಂದ ಕೇಂದ್ರ ರಸ್ತೆ ನಿಧಿ (ಸಿ.ಆರ್.ಎಫ್) ಅಡಿಯಲ್ಲಿ 2008–09 ಸಾಲಿನಲ್ಲಿ ಮಂಜೂರಾದ ಹಣವೆಷ್ಟು (ತಾಲ್ಲೂಕುವಾರು, ಜಿಲ್ಲಾವಾರು ಹಂಚಿಕೆ ಮಾಡಲಾದ ಅನುದಾನದ ವಿವರಗಳು ಹಾಗೂ ಕಾಮಗಾರಿಗಳ ಪಟ್ಟಿಯನ್ನು ಒದಗಿಸುವುದು)?

ಕೇಂದ್ರ ಸರ್ಕಾರದಿಂದ ಕೇಂದ್ರ ರಸ್ತೆ ನಿಧಿ ಯೋಜನೆಯಡಿ 2008–09ನೇ ಸಾಲಿಗೆ 354 ಕಾಮಗಾರಿಗಳು ರೂ.553.50 ಕೋಟಿ ಮೊತ್ತಕ್ಕೆ ಮಂಜೂರಾಗಿರುತ್ತವೆ. ಕೇಂದ್ರ ಸರ್ಕಾರದ ಮಾರ್ಗ ಸೂಚಿಗಳನ್ವಯ ಹಂಚಿಕೆ ಮಾಡಲಾಗುತ್ತದೆ. ತಾಲ್ಲೂಕು ಜಿಲ್ಲಾವಾರು ಹಂಚಿಕೆ ಉದ್ಭವಿಸುವುದಿಲ್ಲ.

ಆ) ಲೋಕೋಪಯೋಗಿ ಇಲಾಖೆಯಿಂದ ಕೇಂದ್ರ ರಸ್ತೆ ನಿಧಿ (ಸಿ.ಆರ್.ಎಫ್) ಅಡಿಯಲ್ಲಿ 2008–09ನೇ ಸಾಲಿನಲ್ಲಿ ಅನುದಾನ ವಂಚಿತ ತಾಲೂಕು ಮತ್ತು ಜಿಲ್ಲೆಗಳು ಯಾವುವು (ವಿವರಗಳನ್ನು ಒದಗಿಸುವುದು)?

ಕೇಂದ್ರ ರಸ್ತೆನಿಧಿ ಯೋಜನೆಯ ಮಾರ್ಗಸೂಚಿಗಳನ್ವಯ ಅಗತ್ಯತೆಗೆ ಅನುಸಾರವಾಗಿ ಕಾಮಗಾರಿಗಳನ್ನು ಮಂಜೂರು ಮಾಡಲಾಗುತಯ್ತದೆ. ಆದರೆ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಹಂಚಿಕೆಗೆ ಅವಕಾಶವಿರುವುದಿಲ್ಲ. ಆದುದರಿಂದ ವಿವರಗಳನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಯೋಜನೆಯಡಿಯಲ್ಲಿ ಅನುದಾನ ಹಂಚಿಕೆ ಮಾಡಲು ಅನುಸರಿಸಬೇಕಾದ ಮಾನದಂಡಗಳೇನು?

ಕೇಂದ್ರ ಸರ್ಕಾರದ ಸುತ್ತೋಲೆಯಲ್ಲಿಯ ಮಾನದಂಡಗಳು ಈ ಕೆಳಗಿನಂತಿವೆ.

1. ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆಗಳು(ಗ್ರಾಮೀಣ ರಸ್ತೆ ಹೊರತುಪಡಿಸಿ)

2. ಸೇತುವೆಗಳ ಪುನರುಜ್ಜೀವನ, ಕ್ರಾಸ್ ಡ್ರೈನೇಜ್, ಬಲಹೀನ ರಸ್ತೆಗಳ ಬಲಪಡಿಸುವಿಕೆ, ಬೈಪಾಸ್ ನಿರ್ಮಾಣ, ಸರ್ವೀಸ್ ರಸ್ತೆ, ರಾಷ್ಟ್ರೀಯ ಹೆದ್ದಾರಿಗಳಿಗೆ ಹಾಗೂ ಪ್ರವಾಸಿ ತಾಣಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು.

3. ಸಾಕಷ್ಟು ಉದ್ದವಿರುವ ಕನಿಷ್ಟ ಪಕ್ಷ 10.00 ಕಿಮೀ. ಉದ್ದವಿರುವ ರಸ್ತೆಗಳು, ಉದ್ದ ಕಡಿಮೆ ಇದ್ದಲ್ಲಿ ಸ್ಪಷ್ಟವಾದ ಸಮಂಜಸ ಕಾರಣಗಳನ್ನು ನೀಡಬೆಕು. ಇಂತಹ ಪ್ರಸ್ತಾವನೆಗಳನ್ನು ಅನುದಾನದ ಲಭ್ಯತೆ ಮೇರೆಗೆ ಕೇಂದ್ರ ಸರ್ಕಾರಕ್ಕೆ ನಿಗದಿಗ ನಮೂನೆಯಲ್ಲಿ ಪಟ್ಟಿ ಸಲ್ಲಿಸಲಾಗುವುದು. ಕೇಂದ್ರ ಸರ್ಕಾರದ ಅನುಮೋದನೆ ದೊರೆತ ನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಈ) ವಿದಿ ವಿಧಾನಗಳು ಉಲ್ಲಂಘನೆಯಾಗಿದ್ದಲ್ಲಿ, ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗಿದೆಯೇ (ಮಾಹಿತಿ ಒದಗಿಸುವುದು)?

ವಿದಿ ವಿಧನಗಳನ್ನು ಉಲ್ಲಂಘಿಸಲಾಗಿರುವುದಿಲ್ಲ.

ಕರ್ನಾಟಕ ವಿಧಾನ ಸಭೆ

233 ಡಾ: ಮಹದೇವಪ್ಪ ಹೆಚ್.ಸಿ.

ಬಿ.ಎಸ್.ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಯವರು

ಅ) ಬೆಂಗಳೂರು ನಗರದ ಅಭಿವೃದ್ಧಿಯ ಸಲುವಾಗಿ ಕಳೆದ ಒಂದು ವರ್ಷದಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರಕಾರಕ್ಕೆ ನೀಡಲಾಗಿರುವ ಅನುದಾನವೆಷ್ಟು;

2008–09ನೇ ಸಾಲಿನಲ್ಲಿ ಕೇಂದ್ರ ಸಕಾರವು ಜೆ.ಎನ್.ಎನ್.ಯು. ಆರ್.ಎಂ. ಯೋಜನೆ ಅಡಿಯಲ್ಲಿ ಬೆಂಗಳೂರಿನ 15 ಅನುಮೋದಿತ ಯೋಜನೆಗಳಿಗಾಗಿ ರೂ. 126.28 ಕೋಟಿಗಳನ್ನು ಬಿಡುಗಡೆ ಮಾಡಿದೆ. ಜೆ.ಎನ್.ಎನ್.ಯು.ಆರ್.ಎಂ. ಯೋಜನೆ ಅಡಿಯಲ್ಲಿ 2006–07ನೇ ಸಾಲಿನಿಂದ ಈವರೆವಿಗೂ ರೂ.3612.95 ಕೋಟಿಗಳ ಮೊತ್ತದ 47 ಯೋಜನೆಗಳು ಬೆಂಗಳೂರು ನಗರಕ್ಕೆ ಮಂಜೂರಾಗಿದ್ದು, ಇದರಲ್ಲಿ ಕೇಂದ್ರ ಸರ್ಕಾರದ ಪಾಲು ರೂ.1320.17 ಕೋಟಿಗಳು.

ಆ) ಈ ಅನುದಾನದಲ್ಲಿ ಇದುವರೆಗೆ ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಅನುದಾನವನ್ನು ನೀಡಲಾಗಿದೆ;

ವಿವರವನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಇ) ಇದುವರೆವಿಗೆ ಖರ್ಚಾಗಿರುವ ಹಣವೆಷ್ಟು; ಖರ್ಚಾಗದಿದ್ದಲ್ಲಿ ಕಾರಣವೇನು;

ವಿವರವನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಈ) ಬೆಂಗಳೂರು ನಗರದ ಅಭಿವೃದ್ಧಿಗೆ ರಾಜ್ಯ ಸರ್ಕಾರದ ಪಾಲೇನು (ಸಮಗ್ರ ಮಾಹಿತಿಯನ್ನು ಒದಗಿಸುವುದು)?